# ‘ನಂದಿ ಜ್ವಾಲೆ’ ಕಣ್ಣಿಗೆ ಇಂಪು

ಈಚೆಗೆ ಇತಿಹಾಸ ಪ್ರಸಿದ್ಧ ಹಳೇಬೀಡು ದೇವಸ್ಥಾನಕ್ಕೆ ಭೇಟಿ ನೀಡಿದ್ದೆ. ಅಲ್ಲಿನ ಸುಂದರ ಹೂದೋಟದಲ್ಲಿ ‘ಆಫ್ರಿಕನ್ ಟ್ಯುಲಿಪ್’ ಮರವು ಕಿತ್ತಳೆ ಕೆಂಪು ಬಣ್ಣದ ಬೆಂಕಿ ಜ್ವಾಲೆಯಂಥಾ ದೊಡ್ಡ ದೊಡ್ಡ ಹೂವುಗಳನ್ನು ಹೊತ್ತು ಕಣ್ಣಿಗೆ ಇಂಪು ನೀಡುತ್ತಿತ್ತು. ಹಾಸನದ ಉದ್ಯಾನವೊಂದರಲ್ಲೂ ಈ ಮರವನ್ನು ಗಮನಿಸಿದ್ದೆ. ನಮ್ಮೂರಿನ ಹಲವೆಡೆ ಈ ಮರ ಕಣ್ಣಿಗೆ ಬಿದ್ದಿದ್ದು ನೆನಪಿಗೆ ಬಂತು.

ಪಾಶ್ಚಿಮಾತ್ಯ ದೇಶಗಳ ಸುಪ್ರಸಿದ್ಧ ಟ್ಯುಲಿಪ್ ಹೂಗಳಿಗೂ, ಆಫ್ರಿಕಾ ದೇಶಕ್ಕೂ, ನಮ್ಮ ದೇಶದ ಹಲವೆಡೆ ಕಂಡುಬರುವ ಈ ಮರಕ್ಕೂ ಏನಪ್ಪಾ ಕನೆಕ್ಷನ್... ಎಂದು ಹುಡುಕಿ ಹೊರಟಾಗ ಇದರ ಕುರಿತಾಗಿ ಅತ್ಯಂತ ವಿಶಿಷ್ಟ ಮಾಹಿತಿಗಳು ಲಭ್ಯವಾದವು. ಸುಮಾರು 7ರಿಂದ 25ಮೀಟರ್ ಎತ್ತರಕ್ಕೆ ಬೆಳೆಯುವ ಈ ಮರದ ವೈಜ್ಞಾನಿಕ ಹೆಸರು ‘ಸ್ಪಾಥೋಡಿಯಾ ಕಾಂಪಾನುಲೇಟಾ’. ಆಫ್ರಿಕಾ ಮೂಲದ ಈ ಮರವು ಅಲ್ಲಿನ ಸವನ್ನ ಕಾಡುಗಳಲ್ಲಿ ಅತಿ ಹೆಚ್ಚಾಗಿ ಕಂಡುಬರುತ್ತದೆ.

ಅತಿ ಶೀಘ್ರವಾಗಿ ಹಬ್ಬುವ ಗುಣದಿಂದ ಇಂದು ಪ್ರಪಂಚದ ಬಹುಭಾಗಗಳಲ್ಲಿ ಹೇರಳವಾಗಿ ಈ ಮರವನ್ನು ಬೆಳೆಸಲಾಗುತ್ತದೆ. ಈ ಗುಣವನ್ನು ಆಕ್ರಮಣಕಾರಿ ಎಂತಲೂ ಹಲವರು ಕರೆಯುತ್ತಾರೆ. ಈ ಗುಣದ ಕಾರಣಕ್ಕೆ ‘ಪ್ರಪಂಚದ ನೂರು ಕೆಟ್ಟ ಅತಿಕ್ರಮಣಕಾರಿ ಮರಗಳಲ್ಲಿ ಇದೂ ಒಂದು’ (**worst Invader Tree**) ಎಂಬ ಕುಖ್ಯಾತಿಯೂ ಇದಕ್ಕಿದೆ.

ಕನ್ನಡದಲ್ಲಿ ಈ ಮರಕ್ಕೆ ‘ನೀರು ಕಾಯಿ’ ಮರ ಎನ್ನುತ್ತಾರೆ. ಇದರ ಕಂದು ಬಿಳಿ ಬಣ್ಣದ ಕಾಂಡ ಪೀಠೋಪಕರಣಗಳ ತಯಾರಿಕೆಗೂ ಬಳಸಲ್ಪಡುತ್ತದೆ. ಮುಖ್ಯವಾಗಿ ಆಲಂಕಾರಿಕ ಮರವಾದ ಇದನ್ನು ನೆರಳಿಗಾಗಿಯೂ ಬೆಳಸುತ್ತಾರೆ. ಬಾರ್ಬೆಟ್ ಹಕ್ಕಿಗಳಿಗೆ ಈ ಮರದ ಪೊಟರೆಗಳು ಅತ್ಯಂತ ನೆಚ್ಚಿನ ತಾಣ. ಪೊಟರೆಗಳಲ್ಲಿ ಹೆಚ್ಚಾಗಿ ಗೂಡು ನಿರ್ಮಿಸಿಕೊಳ್ಳುತ್ತವೆ. 8ರಿಂದ 15 ಸೆಂಟಿಮೀಟರ್‌ಗಳಷ್ಟು ದೊಡ್ಡ ಗಾತ್ರದ ಟ್ಯುಲಿಪ್‌ನಂತಹ ಹೂವುಗಳನ್ನು ಬಿಡುವ ಕಾರಣಕ್ಕೆ, ಈ ಹೂವು ಬೆಂಕಿಯ ಜ್ವಾಲೆಯನ್ನು ಹೋಲುವುದರಿಂದ ಈ ಮರಕ್ಕೆ ‘ನಂದಿ ಫ್ಲೇಮ್ ಟ್ರೀ’ ಎಂಬ ಹೆಸರೂ ಇದೆ.

ಇದರ ಬೀಜಗಳನ್ನು ಆಫ್ರಿಕಾದಲ್ಲಿ ತಿನ್ನುತ್ತಾರೆ. ಇದರ ಹಣ್ಣಿನ ಗಟ್ಟಿಯಾದ ಒಳಭಾಗವು ಅತ್ಯಂತ ವಿಷಕಾರಿ. ಕೆಲವು ಪ್ರಾಣಿಗಳನ್ನು ಸಾಯಿಸಲೂ ಸಹ ಅಲ್ಲಿ ಹಣ್ಣಿನ ಗಟ್ಟಿಯಾದ ಭಾಗವನ್ನು ಬಳಸುತ್ತಾರೆ. ಇದರ ತೊಗಟೆಗೆ ಔಷಧೀಯ ಗುಣವಿದ್ದು, ಕೆಲವು ರೋಗ ನಿರೋಧಕ ಔಷಧಿಗಳ ತಯಾರಿಕೆಯಲ್ಲಿ ಇದರ ಸೊನೆಯನ್ನು ಬಳಸುತ್ತಾರೆ. ಒಟ್ಟಾರೆ ತನ್ನ ಬಹುಮುಖಿ ಗುಣಗಳಿಂದ ವಿದೇಶಿ ಮೂಲದ್ದಾದರೂ, ಈ ಮರ ನಮ್ಮಲ್ಲೂ ಒಂದಾಗಿ ಬೆರೆತಿದೆ.

–ಎಚ್.ಎಸ್. ನವೀನ ಕುಮಾರ್, ಹೊಸದುರ್ಗ






# ಭೂಗರ್ಭದೊಡಲಲಿ ‘ಲಿಲ್ಲಿ’

ಬೇಸಿಗೆ ಕಾಲದಲ್ಲಿ ಭೂಗರ್ಭದ ಒಳಗೆ ಹೂತಿರುವ ಈ ಹೂವು ಮೊದಲ ಮಳೆ ಬಿದ್ದಾಗ ಭೂಮಿಯಿಂದ ಹೊರಗೆ ಬಂದು ತನ್ನ ಇರುವನ್ನು ವ್ಯಕ್ತಪಡಿಸುತ್ತದೆ. ಮಳೆ ಬಿದ್ದ ಬಳಿಕ ಏಪ್ರಿಲ್, ಮೇ ವೇಳೆಗೆ ಈ ಕೆಂಪು ಬಣ್ಣದ ಹೂವು ಭೂಮಿಯ ಮೇಲೆ ಕಾಣಿಸಿಕೊಂಡು ಗಮನ ಸೆಳೆಯುತ್ತದೆ. ಲಿಲ್ಲಿ ಎಂದು ಸ್ಥಳೀಯವಾಗಿ ಕರೆಯುವ ಈ ಹೂವು ಗೆಡ್ಡೆ ಸಸ್ಯ. ಮಳೆ ಬಿದ್ದ ಬಳಿಕ ಕಾಣಿಸಿಕೊಳ್ಳುವ ಈ ಹೂವು ಕೆಲವು ದಿನಗಳ ಕಾಲ ಹಾಗೆಯೇ ಇರುತ್ತದೆ. ಇದು ಯಾವ ಸುವಾಸನೆಯನ್ನೂ ಬೀರುವುದಿಲ್ಲ. ಇದರ ಸಸ್ಯಾಭಿವೃದ್ಧಿಯೂ ಗೆಡ್ಡೆಯ ಮೂಲಕವೇ ಆಗುತ್ತದೆ. ಹೂವು ಬಿಟ್ಟಾಗ ಆಕರ್ಷಕವಾಗಿ ಕಾಣುವ ಇದನ್ನು ಕೆಲವರು ಮನೆಯ ಕೈ ತೋಟದಲ್ಲಿ ಬೆಳೆಸುತ್ತಾರೆ. ಗೆಡ್ಡೆಯಿಂದ ಸುಮಾರು ಒಂದು, ಒಂದೂವರೆ ಅಡಿ ಉದ್ದದ ನೀಳ ಎಲೆಗಳ ತುದಿಯಲ್ಲಿ ಹೂಗಳು ಅರಳುತ್ತವೆ. ಯಾವುದೇ ಆರೈಕೆ ಇಲ್ಲದೆ ಬೆಳೆಯುವ ಇವು ಬೇಸಿಗೆ ವೇಳೆ ಗುಂಪಾಗಿ ಅರಳಿ ಪುಷ್ಪಪ್ರಿಯರ ಮನಸಿಗೆ ಸಂತಸ ನೀಡುತ್ತವೆ.

–ಅರುಣ್ ಕಿಲ್ಲೂರು



# ಹಳಿ ಮೇಲೊಂದು ಹೋಟೆಲ್

ಹುಬ್ಬಳ್ಳಿ ರೈಲ್ವೆ ಸ್ಟೇಷನ್‌ನಿಂದ ಹೊರ ಬಂದು ಆಟೊಸ್ಟ್ಯಾಂಡ್ ದಾಟಿ ಮೆಟ್ಟಿಲುಗಳನ್ನಿಳಿದರೆ ಎಡಭಾಗದಲ್ಲೊಂದು ವಿಶೇಷವಾದ ಹೋಟೆಲ್ ಕಣ್ಣಿಗೆ ಕಾಣುತ್ತದೆ. ಆ ಹೋಟೆಲ್ ಚಕ್ರಗಳ ಮೇಲಿದೆ ಎನ್ನುವುದು ವಿಶೇಷ.

‘ಬೋಗಿ ಬೋಗಿ’ ಹೆಸರು ಹೊತ್ತಿರುವ ಈ ಹೋಟೆಲ್ ಎ.ಸಿ ರೈಲ್ವೆ ಬೋಗಿಯಿಂದ ನಿರ್ಮಾಣಗೊಂಡಿದ್ದು, ನೋಡಲು ಅತ್ಯಾಕರ್ಷಕವಾಗಿದೆ. ಹಳದಿ, ಹಸುರು ಬಣ್ಣಗಳನ್ನು ತನ್ನ ಮೈಗೆಲ್ಲಾ ಬಳಸಿಕೊಂಡ ಈ ಉಗಿಬಂಡಿ, ಸಿಂಹ, ಆನೆ, ಹಕ್ಕಿ, ಚಿಟ್ಟೆ, ವಿಧಾನಸೌಧ, ಜಿರಾಫೆ ಮುಂತಾದ ಚಿತ್ರಗಳಿಂದ ಜೀವತುಂಬಿದೆ. ಹೊರಗಡೆ ಫೋಟೊ ಕ್ಲಿಕ್ಕಿಸಿಕೊಳ್ಳಲು ಒಂದು ಸ್ಥಳವೂ ಇದ್ದು, ಒಳಗೆ ಸ್ಟಾರ್ ಹೋಟೆಲ್‌ನಂತೆ ಸುಸಜ್ಜಿತವಾಗಿದೆ. ಇದು ಯಾರ ಆಲೋಚನೆಯೋ ಗೊತ್ತಿಲ್ಲ! ಆದರೆ ಹೆಚ್ಚಿನ ಖರ್ಚಿಲ್ಲದೆ, ಕೆಲಸವಿಲ್ಲದೆ ನಿಂತ ಬೋಗಿಯೊಂದು ರೆಸ್ಟೋರೆಂಟ್ ಆಗಿ ಬದಲಾಗಿದೆ. ಹಳಿ ಮೇಲಿದ್ದರೂ ಇಲ್ಲದಿದ್ದರೂ ಚಲಿಸುವ ಗುಣವಿದೆ ಎನ್ನುವುದನ್ನು ಈ ಬೋಗಿ ಸಾರುತ್ತಿದೆ.

–ಸೀತಾ ಎಸ್. ನಾರಾಯಣ, ಹರಿಹರ

